ಓ.ಎಸ್ ನಂ.17/2022 ಡಿ.ಡಬ್ಲ್ಯೂ-1 (ಸುರೇಶ್ ಕೆ)

**ಸಾಕ್ಷಿಯನ್ನು ದಿನಾಂಕಃ 24.09.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ವಕೀಲರಾದ ಶ್ರೀ ಎಂ ಎಸ್ ಎಂ ವಕೀಲರಿಂದಃ**

5 ರಿಂದ 7 ನೇ ಪ್ರತಿವಾದಿಗಳ ಹೆಸರು ನನಗೆ ತಿಳಿದಿರುವುದಿಲ್ಲ. ನಾನು ಪ್ರತಿವಾದಿ 5 ರಿಂದ 7 ರವರಗಳ ಬಗ್ಗೆ ತಿಳಿದುಕೊಂಡೆ ಐಟಂ ನಂ. 1 ಆಸ್ತಿಯನ್ನು ಖರೀದಿಸಿರುತ್ತೇನೆ. ನನ್ನ ಲಿಖಿತ ಹೇಳಿಕೆಯ ಖಂಡಿಕೆ 21 ರಲ್ಲಿ ಹೇಳಿರುವಂತೆ ಪ್ರತಿವಾದಿ 5 ರಿಂದ 7 ರವರಿಗೆ ವೈಯಕ್ತಿಕ ಕಾರಣಗಳಿಂದ ತೊಂದರೆ ಇದ್ದುದ್ದರಿಂದ ಪ್ರತಿವಾದಿ 23 ರವರಿಗೆ ದಾವಾಸ್ತಿಯನ್ನು ಮಾರಿರುತ್ತಾರೆ ಎಂದು ತಿಳಿಸಿದ್ದು ಅ ಬಗ್ಗೆ ನನಗೆ ಪ್ರತಿವಾದಿ 23 ರವರು ತಿಳಿಸಿರುವುದರಿಂದ ತಿಳಿದು ಬಂದಿರುತ್ತದೆ. ನಾನು ಐಟಂ ನಂ.1 ರ ದಾವಾಸ್ತಿಯನ್ನು ಖರೀದಿಸುವ ಪೂರ್ವದಲ್ಲಿ ಪ್ರತಿವಾದಿ 23 ರವರು ಕರೆಸಿ ಮಾತನಾಡಿರುವುದಿಲ್ಲ.

ನಾನು ದಾವಾ ಐಟಂ ನಂ 1 ರ ಆಸ್ತಿಯನ್ನು ಖರೀದಿಸುವ ಸಮಯದಲ್ಲಿ ನನಗೆ ಮಾರಾಟ ಮಾಡಿದ ಪ್ರತಿವಾದಿ 10 ರಿಂದ 21 ರ ರವರುಗಳ ಜೊತೆಯಲ್ಲಿ ಸದರಿ ಆಸ್ತಿಗೆ ಸಂಬಂಧಿಸಿದ ದಾಖಲಾತಿಗಳನ್ನು ಯಾವಾಗ ಪಡೆದುಕೊಂಡಿರುತ್ತೇನೆ ಎಂದು ತಿಳಿದುಕೊಂಡಿರುವುದಿಲ್ಲ. ನಿಡಿ 1 ರ ದಾಖಲಾತಿಯನ್ನು ದಿಃ 06.11.2024 ರಂದು ಪಡೆದುಕೊಂಡಿರುತ್ತೇನೆ ಎಂದರೆ ಸರಿ. ನಿಡಿ 4 ರಿಂದ 32 ರ ದಾಖಲಾತಿಗಳನ್ನು ನಾನು ಪ್ರತಿವಾದಿ 10 ರಿಂದ 21 ರವರ ಕಡೆಯಿಂದ ಕ್ರಯಪತ್ರವಾದ ನಂತರದಲ್ಲಿ ಪೆಡೆದುಕೊಳ್ಳಲಾಗಿರುತ್ತದೆ ಎಂದರೆ ಸರಿ, ಸಾಕ್ಷಿಯು ಮುಂದುವರಿದು ಸದರಿ ಆಸ್ತಿಯನ್ನು ಖರೀದಿಸುವ ಸಮಯದಲ್ಲಿ ಕೆಲವು ದಾಖಲಾತಿಗಳನ್ನು ಪಡೆದುಕೊಂಡಿದ್ದೆ ಎಂದು ನುಡಿಯುತ್ತಾರೆ. ನಿಡಿ 36 ರ ಎಂ ಆರ್ ನಲ್ಲಿ ಹೇಳಿರುವ ವಿಭಾಗ ಪತ್ರಕ್ಕೆ ಸಂಬಂಧಿಸಿದಂತೆ ವಿಭಾಗ ಪತ್ರವನ್ನು ಪಡೆದುಕೊಂಡಿರುತ್ತೀರಾ ಎಂದರೆ ಸಾಕ್ಷಿಯು ಪಡೆದುಕೊಂಡಿರುತ್ತೇನೆ ಎಂದು ನುಡಿಯುತ್ತಾರೆ.

ಹಳ್ಳದಮನುಗನಹಳ್ಳಿ ಗ್ರಾಮದ ಸ. ನಂ. 82 ರಲ್ಲಿ ಒಟ್ಟು ಎಷ್ಟು ವಿಸ್ತೀರ್ಣದ ಜಮೀನು ಇತ್ತು ಎಂದು ನನಗೆ ತಿಳಿದಿರುವುದಿಲ್ಲ. ಸಾಕ್ಷಿಗೆ ವಾದಿಗಳು ಮತ್ತು ನನಗೆ ಮಾರಾಟ ಮಾಡಿದ ಪ್ರತಿವಾದಿ 10 ರಿಂದ 21 ರವರುಗಳಿಗೆ ಎಷ್ಟು ಎಕರೆ ಜಮೀನು ಇತ್ತು ಎಂದು ನನಗೆ ತಿಳಿದಿರುತ್ತದೆ. ಅವರಿಗೆ ಒಟ್ಟು 9 ಎಕರೆ 10 ಗುಂಟೆ ಜಮೀನು ಇತ್ತು. ನಾನು ಹೇಳಿರುವಂತೆ ಯಾವುದೇ ವಿಭಾಗ ಆಗಿರುವುದಿಲ್ಲ, ಆದರೂ ಸಹ ಪ್ರತಿವಾದಿ 10 ರಿಂದ 21 ರವರುಗಳ ಜೊತೆ ಸೇರಿ ದಾವಾ ಐಟಂ ನಂ.1 ರ ಆಸ್ತಿಯನ್ನು ಅಕ್ರಮವಾಗಿ ಖರೀದಿಸಿರುತ್ತೇನೆ ಆದುದ್ದರಿಂದ ಮೂಲ ದಾಖಲಾತಿಗಳನ್ನು ಹಾಜರು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಐಟಂ ನಂ.1 ರ ಆಸ್ತಿಯನ್ನು ಖರೀದಿಸುವ ಸಮಯದಲ್ಲಿ ಪಾರಂ 5 ಮತ್ತು 6 ನ್ನು ಪಡೆದುಕೊಂಡೆ ಖರೀದಿಸಿರುತ್ತೇನೆ ಮತ್ತು ಅದನ್ನು ನ್ಯಾಯಲಾಯಕ್ಕೆ ಹಾಜರುಡಿಸಿರುತ್ತೇನೆ. ಸಾಕ್ಷಿಗೆ ಅವರೇ ಹಾಜರುಪಡಿಸಿದ ದಾಖಲಾತಿಗಳನ್ನು ತೋರಿಸಿ ಸದರಿ ಪಾರಂ 5 ಮತ್ತು 6 ಅನ್ನು ತೋರಿಸುವಂತೆ ಕೇಳಲಾಗಿ ಸಾಕ್ಷಿಯು ದಾಖಲಾತಿಗಳನ್ನು ಪರಿಶೀಲಿಸಿ ಪಾರಂ 5 ಮತ್ತು 6 ಅನು ಹಾಜರುಪಡಿಸಿರುವುದಿಲ್ಲ ಎಂದು ನುಡಿಯುತ್ತಾರೆ. ಐಟಂ ನಂ.1 ರ ಆಸ್ತಿಯು ಪ್ರತಿವಾದಿ 10 ರಿಂದ 21 ರವರ ಪಿತ್ರಾರ್ಜಿತ ಆಸ್ತಿಯಾಗಿದ್ದು, ಅದು ಸರ್ಕಾರದಿಂದ ಮಂಜೂರಾದ ಜಮೀನು ಆಗಿರುತ್ತದೆ ಎಂದರೆ ಸಾಕ್ಷಿಯ ಅದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಐಟಂ ನಂ.1 ರ ಆಸ್ತಿಗೆ ಸಬಂದಿಸಿದಂತೆ ಯಾವುದೇ ದಾಖಲಾತಿಗಳನ್ನು ಪ್ರತಿವಾದಿ 10 ರಿಂದ 21 ರವರಿಂದ ಪಡೆದುಕೊಳ್ಳದೆ ಅವರೊಂದಿಗೆ ಶಾಮೀಲಾಗಿ ಸುಳ್ಳು ಕ್ರಯ ಪತ್ರ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸಾ ಸ ಇ ಒ.,

ಹಿರಿಯ ಸಿ.ಜೆ ಮತ್ತು ಜೆ.ಎಂ.ಎಫ್.ಸಿ.,
ಹೆಚ್.ಡಿ.ಕೋಟೆ